# ನಕ್ಕರೆ ಅದೇ ಸ್ವರ್ಗ!



■ ನರಸಿಂಹಾರೆಡ್ಡಿ ಯಂಕಾಮೋಳ
ಕಲೆ: ಸಂತೋಷ್ ಸಸಿಹಿತ್ಲು

ಕುಂತಲ ದೇಶದ ಮಹಾರಾಜ ಚಂದ್ರಸೇನರು ತಮ್ಮ ಆಸ್ಥಾನದ ಚಿತ್ರಕಲಾವಿದನಾದ ಬ್ರಹ್ಮದತ್ತನನ್ನು ಜೊತೆಗೆ ಕರೆದುಕೊಂಡು ದೇಶಸಂಚಾರಕ್ಕೆ ಹೊರಟರು. ಪ್ರಜೆಗಳ ಕಷ್ಟಗಳನ್ನು ಅರಿಯುವುದು ಅವರ ಮುಖ್ಯ ಉದ್ದೇಶವಾಗಿತ್ತು. ಹಾಗೆಯೇ ದೇಶದ ಪ್ರಮುಖ ದೇವಾಲಯಗಳ ದರ್ಶನ ಮಾಡಿ ಬರೋಣವೆಂದುಕೊಂಡರು. ಒಂದೆರಡು ದಿನ ಸಾಗಿತು ಪಯಣ. ಒಂದು ಕಡೆ ಗುಡಿಯ ಹತ್ತಿರ ಜನ ಸೇರಿದ್ದರು. ಅಲ್ಲಿ ಮುನಿಯೊಬ್ಬರು ಜನರ ಸಮಸ್ಯೆಗಳನ್ನು ಆಲಿಸಿ, ಆಶೀರ್ವದಿಸುತ್ತಿದ್ದರು.

ಈ ಮುನಿಗಳಿಗೆ ಜನರು ಏನು ಬೇಡಿದರೂ ವರ ನೀಡುವ ಶಕ್ತಿಯಿದೆಯೆಂದು ಮಾತನಾಡಿಕೊಳ್ಳುತ್ತಿದ್ದರು. ಮಹಾರಾಜರು ಮತ್ತು ಬ್ರಹ್ಮದತ್ತ ಅಲ್ಲಿಗೆ ಹೋಗಿ ನಮಸ್ಕರಿಸಿದರು. ಮಹಾರಾಜರು ನಮ್ಮ ರಾಜ್ಯ ಸುಭಿಕ್ಷದಿಂದಿರಲಿ ಎಂದು ಬೇಡಿಕೊಂಡರು. ಇನ್ನು ಬ್ರಹ್ಮದತ್ತನ ಸರದಿ ಬಂತು. ಓ ಮುನಿಗಳೇ, ನಾನು ನಕ್ಕರೆ ಎಂತಹ ಸಮಸ್ಯೆಯಾದರೂ ಪರಿಹಾರವಾಗಲೆಂಬ ವರ ನೀಡಿ ಎಂದ. ಹಾಗೆಯೇ ಆಗಲಿ ಎಂದು ಇಬ್ಬರನ್ನು ಆಶೀರ್ವದಿಸಿ ಕಳುಹಿಸಿದರು ಮುನಿಗಳು. ದೇಶಸಂಚಾರ ಮುಗಿಯಿತು, ಮತ್ತೆ ರಾಜ್ಯಕ್ಕೆ ವಾಪಸಾದರು. ಇವರು ಬಂದ ಸ್ವಲ್ಪದಿನದಲ್ಲೇ ರಾಜ್ಯಕ್ಕೆ ಭೀಕರ ಬರಗಾಲ ಆವರಿಸಿತು. ಮಳೆಯಿಲ್ಲದೆ ಬೆಳೆಯಿಲ್ಲದೆ ರಾಜ್ಯವೆಲ್ಲಾ ಹಾಹಾಕಾರವೆದ್ದಿತು. ಮಹಾರಾಜರಿಗೆ ಪ್ರಜೆಗಳ ಚಿಂತೆಯಾಯಿತು. ಮುನಿಗಳ ಆಶೀರ್ವಾದ ಸುಳ್ಳಾಯಿತೆಂದುಕೊಂಡರು. ಆ ಮುನಿಗಳು ಬ್ರಹ್ಮದತ್ತನಿಗೆ ಕೊಟ್ಟ ವರ ನೆನಪಾಯಿತು. ನೋಡೋಣ, ಅವರ ಆಶೀರ್ವಾದ ಕೆಲಸ ಮಾಡುತ್ತದೆಯಾ ಎಂದುಕೊಂಡರು. ಬ್ರಹ್ಮದತ್ತ ದೇಶಸಂಚಾರ ಮಾಡಿಬಂದಾಗಿನಿಂದ ಮೌನವಾಗಿದ್ದ. ಒಂದು ಸಲವೂ ನಕ್ಕಿರಲಿಲ್ಲ. ರಾಜಸಭೆಯಲ್ಲಿ ಮಹಾರಾಜರು ಪ್ರಶ್ನಿಸಿದರು. ಬ್ರಹ್ಮದತ್ತ ನೀನು ನಕ್ಕರೆ ಎಂತಹ ಸಮಸ್ಯೆಯಾದರೂ ಪರಿಹಾರವಾಗುತ್ತದೆಯೆಂದು ವರ ಪಡೆದಿರುವೆ, ಈಗ ರಾಜ್ಯಕ್ಕೆ ಬರಗಾಲವೆಂಬ ಸಮಸ್ಯೆ ಬಂದಿದೆ. ಒಮ್ಮೆ ನೀನು ನಕ್ಕರೆ ಈ ಸಮಸ್ಯೆ ಪರಿಹಾರವಾಗಬಹುದು ಎಂದರು. ಊಹುಂ ಬ್ರಹ್ಮದತ್ತ ನಗಲೇ ಇಲ್ಲ, ಮತ್ತದೇ ಮೌನ. ಹೇಗಾದರೂ ಇವನನ್ನು ನಗಿಸಬೇಕೆಂದು ಮಹಾರಾಜರು ಆದೇಶ ಮಾಡಿದರು.

ಹಾಸ್ಯಕಲಾವಿದರು, ನೃತ್ಯ, ನಾಟಕಕಾರರು ಎಲ್ಲರೂ ತಮ್ಮ ಪ್ರದರ್ಶನವನ್ನು ಮಾಡಿತೋರಿಸಿದರೂ ಬ್ರಹ್ಮದತ್ತ ಮೌನ ಮುರಿಯಲಿಲ್ಲ, ನಗಲಿಲ್ಲ. ಮಹಾರಾಜರಿಗೆ ಸಿಟ್ಟು ನೆತ್ತಿಗೇರಿತು, ಈ ರಾಜದ್ರೋಹಿಯನ್ನು ಗಡಿಪಾರು ಮಾಡಿ ಎಂದು ಆದೇಶ ಮಾಡಿದರು. ಅದನ್ನೂ ಮೌನದಿಂದಲೇ ಸ್ವೀಕರಿಸಿ ರಾಜ್ಯ ಬಿಟ್ಟ ಬ್ರಹ್ಮದತ್ತ. ತಿಂಗಳುಗಳು ಕಳೆದವು. ಆಶ್ಚರ್ಯವೆಂಬಂತೆ ಪಕ್ಕದ ರಾಜ್ಯಗಳಿಂದ ಕುಂತಲ ರಾಜ್ಯಕ್ಕೆ ನೆರವೆಂದು ದವಸಧಾನ್ಯಗಳನ್ನು, ಜೀವನೋಪಾಯಕ್ಕಾಗಿ ಧನವನ್ನು ಕಳುಹಿಸಲಾಯಿತು. ಅವೆಲ್ಲವನ್ನು ಸ್ವೀಕರಿಸಿ ಪ್ರಜೆಗಳಿಗೆ ಹಂಚಿಬಿಟ್ಟರು ಮಹಾರಾಜರು. ಮಳೆ ಬಂತು, ಮತ್ತೆ ರಾಜ್ಯ ಸುಭಿಕ್ಷವಾಯಿತು. ಮಹಾರಾಜರಿಗೆ ಬ್ರಹ್ಮದತ್ತನ ಚಿಂತೆ ಶುರುವಾಯಿತು, ಕೋಪದಲ್ಲಿ ದುಡುಕಿ ನಿರ್ಧಾರ ತೆಗೆದುಕೊಂಡೆ ಅನಿಸಿತು. ಚಿಂತೆಯಲ್ಲೇ ಅನಾರೋಗ್ಯದಿಂದ ಹಾಸಿಗೆ ಹಿಡಿದರು. ಹೀಗಾದರೆ ಮಹಾರಾಜರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆಯೆಂದು, ಮಹಾಮಂತ್ರಿಗಳು ಬ್ರಹ್ಮದತ್ತನನ್ನು ಹುಡುಕಲು ರಾಜಭಟರನ್ನು ಕಳುಹಿಸಿದರು. ಎರಡು ದಿನಗಳಲ್ಲಿ ಬ್ರಹ್ಮದತ್ತನು, ರಾಜ್ಯದ ಒಂದು ಮಂದಿರದೊಳಗೆ ಸಿಕ್ಕನು, ಕರೆದುಕೊಂಡು ಬಂದರು. ಮಹಾರಾಜರನ್ನು ನೋಡಲು ಬಂದ ಬ್ರಹ್ಮದತ್ತ ನಗುತ್ತಾ ಮಾತನಾಡಿಸಿದ. ಮಹಾರಾಜರಿಗೆ ಆಶ್ಚರ್ಯವಾಯಿತು, ಬ್ರಹ್ಮದತ್ತ ಆವತ್ತು ರಾಜ್ಯಬಹಿಷ್ಕಾರವೆಂದರೂ ನಗಲಿಲ್ಲ ಈಗ ಹೇಗೆ ನಕ್ಕನು ಎಂದು ಯೋಚಿಸತೊಡಗಿದರು. ಆಗ ಬ್ರಹ್ಮದತ್ತ, ನಿಮ್ಮ ಯೋಚನೆ ನನಗೆ ಅರ್ಥವಾಯಿತು ಪ್ರಭು. ನಾನು ಈ ರಾಜ್ಯ ಬಿಟ್ಟು ಹೋದಮೇಲೆ ಒಂದು ದಿನ ಗಹಗಹಿಸಿ ನಕ್ಕೆ ಅದರ ಫಲವಾಗಿ ಮತ್ತೆ ಮಳೆಯಾಯಿತು ಎಂದ. ಅದು ಹೇಗೆಂದು ಹೇಳುವೆ ಕೇಳಿ, ನಾನು ರಾಜ್ಯದ ಗಡಿದಾಟಿ ಹೊರಟಿದ್ದೆ, ಕತ್ತಲಾಯಿತು. ಒಂದು ಕುಟೀರದಲ್ಲಿ ಆಶ್ರಯ ಪಡೆದೆ. ನಾನು ತಂಗಿದ್ದ ಅದೇ ಕುಟೀರಕ್ಕೆ ಎಮ್ಮೆಗಳನ್ನು ಕಳೆದುಕೊಂಡವನೊಬ್ಬ ಹುಡುಕಾಡುತ್ತಾ ಬಂದು ರಾತ್ರಿಯಾದ ಸಲುವಾಗಿ ಅಲ್ಲೇ ತಂಗಿದ್ದ. ಕಬ್ಬು ಮಾರುವ ಮುದುಕಿಯೊಬ್ಬಳು ಕಬ್ಬಿನ ಹೊರೆ ಜೊತೆ ಅಲ್ಲೇ ಆಶ್ರಯ ಪಡೆದಿದ್ದಳು.